ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಶ್ರೀಮತಿ ಪಾರ್ವತವ್ವ -ವಿರುದ್ಧ ಭಾರತ ಸರ್ಕಾರ ನೈಋತ್ಯ ರೈಲ್ವೆ, ಹುಬ್ಬಳ್ಳಿ

ಎಂ.ಎಫ್.ಎ.ಸಂಖ್ಯೆ: 21416/2009 (ಆರ್‌ಸಿಟಿ), ದಿನಾಂಕ 1 ನೇ ಜುಲೈ, 2016

ತೀರ್ಪು

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:

ಅಪೀಲುದಾರರು ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇವೆ.

2. ಅಂತಿಮವಾಗಿ, ಮುಖ್ಯ ಸಾಕ್ಷ್ಯಗಳನ್ನು ಅಲಕ್ಷಿಸಿ, ವಿಲಕ್ಷಣವಾದ ಕಾರಣವನ್ನು ಅನ್ವಯಿಸಿಕೊಂಡು ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ತಿರಸ್ಕರಿಸಿರುವ ರೀತಿ ಈ ನ್ಯಾಯಾಲಯಕ್ಕೆ ದಿಗ್ಭ್ರಮೆಯನ್ನುಂಟು ಮಾಡಿದೆ.

3. ಇದು ಪ್ಲಾಟ್‌ಫಾರಂನ ಮೇಲೆ ಮೃತನು ರೈಲಿನಿಂದ ಇಳಿಯುವಾಗ ಅಂದರೆ ಪ್ಲಾಟ್‌ಫಾರಂಗೂ ರೈಲಿಗೂ ಇರುವ ನಡುವಿನ ಅಂತರದಲ್ಲಿ ಜಾರಿ ರೈಲಿನ ಗಾಲಿಗಳಡಿಯಲ್ಲಿ ಸಿಲುಕಿ ಕ್ಷಣಮಾತ್ರದಲ್ಲಿ ಮರಣ ಸಂಭವಿಸಿದ ಘಟನೆಯನ್ನು ಸ್ವತಃ ರೈಲಿನ ಚಾಲಕನೇ ವರದಿ ಮಾಡಿರುತ್ತಾನೆಂಬ ವಾಸ್ತವಾಂಶವನ್ನು ನ್ಯಾಯಾಧಿಕರಣ ವೂ ಸಹ ಮನಗ ಂ ಡಿದ್ದು, ಇದು ನಿರ್ವಿವಾದ ವಾಸ್ತವಾಂಶವಾಗಿರುತ್ತದೆ.ಇದರಲ್ಲಿ ವಿವಾದ ಮಾಡುವಂಥ ವಾಸ್ತವಾಂಶವಾಗಲೀ ಅ ಇಲ್ಲವೇ ಇದನ್ನು ವಿವಾದಾತ್ಮಕಗೊಳಿಸುವಂಥ ಸಾಕ್ಷ್ಯವಾಗಲಿ ಇರುವುದಿಲ್ಲ.ನ್ಯಾಯಾಧಿಕರಣವು, ಪೊಲೀಸರಿಗೆ ಅಲ್ಲಿ ಒಂದು ಪ್ಲಾಸ್ಟಿಕ್ ಚೀಲ ಹಾಗೂ ಒಂದು ಹಸಿರುಬಣ್ಣದ ಪ್ಲಾಸ್ಟಿಕ್ ನೀರಿನ ಬಾಟಲಿ ಸಿಕ್ಕಿತ್ತಾದರೂ, ಆ ಚೀಲ ಹಾಗೂ ಪ್ಲಾಸ್ಟಿಕ್ ಪ್ಲೇಟಿನ ಸರಂಜಾಮುಗಳಲ್ಲಿ ಟಿಕೇಟು ಕಂಡು ಬಂದಿರುವುದಿಲ್ಲವೆಂಬ ಅ ಕಾರಣವನ್ನು ನೀಡಿರುತ್ತದೆ.

4. ಮೃತನ ದೇಹ ರೈಲಿನ ಗಾಲಿಗಳಡಿ ಸಿಕ್ಕಿಕೊಂಡು ಛಿದ್ರವಾಗಿರುವಲ್ಲಿ ಕೂಡ ಟಿಕೇಟು ಹಾಳಾಗಿರುವುದಿಲ್ಲ ಅದು ಭದ್ರವಾಗಿರುತ್ತದೆ ಹಾಗೂ ವಸೂಲಿಗೆ ಲಭ್ಯವಾಗುತ್ತದೆಂಬುದು ಪ್ರತ್ಯರ್ಜಿದಾರರ ವಾದವಾಗಿರುವುದಿಲ್ಲ.ದೇಹದ ಮೇಲೆ ಟಿಕೇಟು ಲಭ್ಯವಾಗಿದ್ದರೂ ಕೂಡ, ದೇಹವನ್ನು ಅಭಿಗ್ರಹಿಸಿದ ರೈಲ್ವೆ ಪ್ರಾಧಿಕಾರಿಗಳು ಹಾಗೂ ಪೊಲೀಸ್ ಪ್ರಾಧಿಕಾರಿಗಳು ಅದನ್ನು ಅಭಿಗ್ರಹಿಸಿರುತ್ತಿದ್ದರು.ತಲೆ ಬುರುಡೆ ಹಾಗೂ ಮೂಳೆಗಳನ್ನೆಲ್ಲಾ ಅಪ್ಪಚ್ಚಿ ಮಾಡಿದ್ದ ರೈಲಿನ ಗಾಲಿಗಳು ಕ್ಷಣಮಾತ್ರದಲ್ಲಿ ಟಿಕೇಟನ್ನು ಸಹ ಇಲ್ಲವಾಗಿರಿಸಿರುತ್ತದೆಂಬುದು ಸಾಮಾನ್ಯ ತಿಳುವಳಿಕೆಯಾಗಿರುತ್ತದೆ.ಟಿಕೇಟು ಹಾರಿ ಹೋಗಿರುವ ಅಥವಾ ಗಾಲಿಗಳಡಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಅಥವಾ ರೈಲಿನ ಬೋಗಿಗಳಡಿಯಲ್ಲಿ ಕಚ್ಚಿಕೊಂಡಿರಬಹುದಾದ ಸಾಧ್ಯತೆಗಳೇ ಇರುತ್ತದೆ.ಇವುಗಳಲ್ಲಿ ಯಾವ ಒಂದು ಸಾಧ್ಯತೆಯನ್ನು ನ್ಯಾಯಾಧಿಕರಣವು ಯೋಚಿಸಿರುವುದಿಲ್ಲ.ಪ್ರತ್ಯಕ್ಷ ಸಾಕ್ಷಿಯೆಂದು ಕ್ಲೇಮು ಮಾಡಿದಂಥ ಎ.ಡಬ್ಲ್ಯೂ .2 ರ ಸಾಕ್ಷ್ಯವನ್ನು ಉಪೇಕ್ಷಿಸಿದ ಹಾಗೂ ಕಡೆಗಣಿಸಿದುದಕ್ಕೆ ಸಂಬಂಧಿಸಿದ ಮತ್ತೊಂದು ವಿಲಕ್ಷಣ ಕಾರಣವೆಂದರೆ ಮಾಹಿತಿಯನ್ನು ಚಾಲಕ ನೀಡಿರುತ್ತಾನೆಯೇ ಹೊರತು ಎ.ಡಬ್ಲ್ಯೂ .2 ಆಗಿರುವುದಿಲ್ಲವೆಂಬುದಾಗಿರುತ್ತದೆ.ಇದು ಪ್ರತ್ಯರ್ಜಿದಾರನ ವಾದವೂ ಸಹ ಆಗಿರುವುದಿಲ್ಲ.ಹಾಗಾಗಿ, ದಾಖಲೆ ಮೇಲಿನ ಸಾಕ್ಷ್ಯವನ್ನು ಪುರಸ್ಕರಿಸಿರುವುದು ವ್ಯತಿರಿಕ್ತವಾಗಿದ್ದು, ವಾದವು ಸಮರ್ಥನೀಯವಾಗಿರುವುದಿಲ್ಲ ಹಾಗೂ ನ್ಯಾಯಾಧೀಕರಣವು ಪ್ರತ್ಯರ್ಜಿದಾರರ ಪರ ರೂಪಿಸಿರುವ ವಾದವು ಪ್ರತ್ಯರ್ಜಿದಾರನು ನಿರೂಪಿಸಿರುವ ವಾದವಾಗಿರುವುದಿಲ್ಲವೆಂಬುದು ಈ ನ್ಯಾಯಾಲಯದ ತೀರ್ಮಾನವಾಗಿರುತ್ತದೆ.ಹಾಗಾಗಿ ಅಪೀಲನ್ನು ಪುರಸ್ಕರಿಸಲಾಗಿರುತ್ತದೆ.ತದನುಸಾರವಾಗಿ, ಒ.ಎ.ಸಂಖ್ಯೆ:111/2007 ರಲ್ಲಿನ ಪರಿಹಾರಕ್ಕೆ ಸಂಬಂಧಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ.ಅಪೀಲುದಾರರು ರೈಲ್ವೆ ಅಪಘಾತ ಹಾಗೂ ಅಹಿತಕರ ಘಟನೆಗಳು (ಪರಿಹಾರ)

ನಿಯಮಗಳು, 1990 ರ 3 ನೇ ನಿಯಮದಡಿಯಲ್ಲಿನ ಕ್ಲೇಮಿಗೆ ಹಕ್ಕುಳ್ಳವರಾಗಿರುತ್ತಾರೆಂದು ಹಾಗೂ ಅವರು ಅನುಸೂಚಿಯ ಭಾಗ -1 ರಲ್ಲಿ ಉಪಬಂಧಿಸಿದಂತೆ 4,00,000/ರೂಪಾಯಿಗಳ ಮೊಬಲಗಿಗೆ ಹಕ್ಕುಳ್ಳವರಾಗಿರುತ್ತಾರೆಂದು ಈ ಮೂಲಕ ಘೋಷಿಸಲಾಗಿರುತ್ತದೆ.

5. ಪ್ರತ್ಯರ್ಜಿದಾರರು ಈ ಆದೇಶದ ಪ್ರತಿ ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳೊಳಗೆ ಸದರಿ ಮೊಬಲಗನ್ನು ಠೇವಣಿ ಮಾಡತಕ್ಕದ್ದು.ಸದರಿ ಪರಿಹಾರದ ಮೊಬಲಗನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ ಮೊಬಲಗನ್ನು ಠೇವಣಿ ಮಾಡುವ ದಿನಾಂಕದವರೆಗೂ ವಾರ್ಷಿಕ ಶೇ .4 ರ ಬಡ್ಡಿ ದರದಲ್ಲಿ ಠೇವಣಿ ಮಾಡತಕ್ಕದ್ದು.ಡಿ ಬಡ್ಡಿ ದರವನ್ನು, ದೀರ್ಘಕಾಲೀನ ಇತ್ಯರ್ಥದ ಹಿನ್ನೆಲೆಯಲ್ಲಿ ಕಡಿಮೆ ಮಾಡಲಾಗಿದೆ.